# ಕನ್ನಡ ಶಾಸನಗಳಲ್ಲಿ ಕಂದ ಪದ್ಯಗಳನ್ನು ಗುರುತಿಸುವಲ್ಲಿ ಕೃತಕ ಬುದ್ಧಿಮತ್ತೆ

**ಬಸವರಾಜು ಪಿ.***

**DOI: https://doi.org/10.5281/zenodo.21241736**

**ABSTRACT**

ಕನ್ನಡದ ಪ್ರಾಚೀನ ಗ್ರಂಥ ಹಾಗೂ ಶಾಸನ ಸಾಹಿತ್ಯದಲ್ಲಿ ಚೊಕ್ಕವಾದ ಭಾವಾಭಿವ್ಯಕ್ತಿಗೆ ಕಂದಪದ್ಯಗಳನ್ನು ವ್ಯಾಪಕವಾಗಿ ಬಳಸಲಾಗಿದೆ. ಇತಿಹಾಸದ ಇಂತಹ ಅಮೂಲ್ಯ ಸಾಹಿತ್ಯಿಕ ಕುರುಹುಗಳನ್ನು ಪತ್ತೆಹಚ್ಚಲು ಹಾಗೂ ಕಂದಪದ್ಯಗಳನ್ನು ಶಾಸ್ತ್ರೀಯವಾಗಿ ಗುರುತಿಸಲು ಕೃತಕ ಬುದ್ಧಿಮತ್ತೆ (AI) ಮತ್ತು ಯಂತ್ರಕಲಿಕೆ ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ಇಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಶಾಸನಗಳ ಲಿಪಿ ಸವೆತವನ್ನು ನಿವಾರಿಸಿ, ಅಕ್ಷರಗಳನ್ನು ಓದುವಲ್ಲಿ ಮತ್ತು ಕಾಲನಿರ್ಣಯ ಮಾಡುವಲ್ಲಿ ತಂತ್ರಜ್ಞಾನವು ಯಶಸ್ವಿಯಾಗಿದೆ. ಆದರೆ, ತುಮಕೂರು ಜಿಲ್ಲೆಯ ಪುರ ಗ್ರಾಮದ ಹೊಯ್ಸಳ ಕಾಲದ ಶಾಸನವನ್ನು ಆಧರಿಸಿದ ಪ್ರಾಯೋಗಿಕ ಅಧ್ಯಯನದಲ್ಲಿ, ಕಂದಪದ್ಯಗಳ ಲಘು–ಗುರು ಪ್ರಸ್ತಾರ ಹಾಗೂ ಗಣವಿಂಗಡಣೆಯನ್ನು ನಿಖರವಾಗಿ ಗುರುತಿಸುವಲ್ಲಿ ಎಐ ಇನ್ನು ಸಂಪೂರ್ಣವಾಗಿ ಸಫಲವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿನ ಮಾತ್ರಾ ಸಡಿಲಿಕೆಯನ್ನು ಅರ್ಥೈಸಿಕೊಳ್ಳುವಲ್ಲಿ ಯಂತ್ರಗಳು ಎಡವುತ್ತವೆ. ಆದ್ದರಿಂದ, ಸಾಂಪ್ರದಾಯಿಕ ಛಂದೋನಿಯಮಗಳನ್ನು ಎಐ ತಂತ್ರಜ್ಞಾನಕ್ಕೆ ಸಂಪೂರ್ಣವಾಗಿ ಅಳವಡಿಸುವ ಮೂಲಕ ಭವಿಷ್ಯದಲ್ಲಿ ಶಾಸನಗಳ ಸಾಹಿತ್ಯಿಕ ವಿಶ್ಲೇಷಣೆಯನ್ನು ಅಧ್ಯಯನಕಾರರಿಗೆ ಮತ್ತಷ್ಟು ಸುಗಮಗೊಳಿಸಬಹುದಾದ ತುರ್ತು ಅಗತ್ಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

**KEYWORDS:** ಕನ್ನಡ ಶಾಸನಗಳು, ಕಂದಪದ್ಯ, ಕೃತಕ ಬುದ್ಧಿಮತ್ತೆ, ಛಂದಸ್ಸು ಮತ್ತು ಪ್ರಸ್ತಾರ, ಯಂತ್ರಕಲಿಕೆ.

* **ಡಾ. ಬಸವರಾಜು ಪಿ.,** ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು.

ಪ್ರಾಚೀನ ಕನ್ನಡ ಗ್ರಂಥ ಸಾಹಿತ್ಯ ಹಾಗೂ ಶಾಸನ ಸಾಹಿತ್ಯಗಳಲ್ಲಿ ಸ್ವಲ್ಪ ಭಾಗ ಗದ್ಯವನ್ನು ಬಿಟ್ಟರೆ ಬಹುಪಾಲು ಪದ್ಯವೇ ಇರುವುದು. ಛಂದೋ ನಿಯಮಗಳಿಗೆ ಅನುಗುಣವಾಗಿ ಆಯಾ ಪದ್ಯಗಳ ವೈವಿಧ್ಯತೆಗಳು ಕಂಡುಬರುತ್ತವೆ. ಇಂತಹ ಛಂದೋಬದ್ಧ ಪದ್ಯಗಳನ್ನು ಕವಿಗಳು ತಮ್ಮ ಭಾವಾಭಿವ್ಯಕ್ತಿಗೆ ತಕ್ಕಂತೆ ಮಾಧ್ಯಮವನ್ನಾಗಿಸಿಕೊಂಡರು. ಅದರಲ್ಲಿ ಕಂದಪದ್ಯವನ್ನೇ ಹೆಚ್ಚಿನದಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಏಕೆಂದರೆ ಕಾವ್ಯ ವಸ್ತುವಿಗೆ ಅನುಗುಣವಾಗಿ ತಮ್ಮ ಭಾವನೆಗಳನ್ನು ಚಿಕ್ಕದಾಗಿ ಹಾಗೂ ಚೊಕ್ಕವಾಗಿ ಕಟ್ಟಲು ಕಂದಪದ್ಯಗಳು ಉಪಯುಕ್ತ ಪರಿಕರಗಳಂತೆ ಇದ್ದವು. ಪ್ರಾಚೀನದಿಂದಲೂ ಗ್ರಂಥ ಕವಿಗಳಂತೆ ಶಾಸನ ಕವಿಗಳೂ ತಮ್ಮ ಶಾಸನಗಳಲ್ಲಿ ಶಾಸನ ವಿಷಯವನ್ನು ನಿರೂಪಿಸುವ ಸಂದರ್ಭದಲ್ಲಿ ಕಂದಪದ್ಯವನ್ನು ವಿಶೇಷವಾಗಿ ಬಳಸಿಕೊಂಡಿದ್ದಾರೆ. ಕನ್ನಡ ಶಾಸನಗಳಲ್ಲಿ ಪ್ರಾಚೀನದಿಂದಲೂ ಬಳಕೆಯಾಗಿರುವ ಇಂತಹ ಕಂದಪದ್ಯಗಳನ್ನು ಗುರುತಿಸಿ ಅವುಗಳ ಪ್ರಾಮುಖ್ಯತೆಯನ್ನು ತಿಳಿಯಲು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳಲು ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ಇಲ್ಲಿ ಪರಿಶೀಲನೆ ಮಾಡಲಾಗಿದೆ.

ಮೊದಲಿಗೆ ಲಾಕ್ಷಣಿಕರು ನಿರೂಪಿಸಿರುವ ಕಂದಪದ್ಯದ ಲಕ್ಷಣಗಳನ್ನು ನೋಡೋಣ: ಮಾತ್ರಾವೃತ್ತಗಳು ಪ್ರಾಕೃತ ಛಂದಸ್ಸಿನಿಂದ ಕನ್ನಡಕ್ಕೆ ಬಹುಹಿಂದೆಯೇ ಬಂದಂತಹವು. ಅವುಗಳಲ್ಲಿ ಪ್ರಮುಖವಾಗಿ ಕಂದವೂ ಒಂದು. ಇಂತಹ ಕಂದಕ್ಕೆ ಮೂಲ ಆರ್ಯೆ. ಸಂಸ್ಕೃತದ ಮಾತ್ರಾವೃತ್ತಗಳಲ್ಲಿ ಆರ್ಯೆಯನ್ನು ಸಮೀಪಿಸುವ ಲಕ್ಷಣವನ್ನು ಹೊಂದಿರುವಂತಹುದು ಕಂದ. ಅಂದರೆ ಆರ್ಯೆಯನ್ನು ಅನುಸರಿಸಿ ಪ್ರಾಕೃತದಲ್ಲಿ ಸ್ಕಂದಕ ಎಂಬ ಛಂದೋಬಂಧ ಮಾರ್ಗವಾಗಿ ಸ್ಕಂದಕವು ಕನ್ನಡ ಮತ್ತು ತೆಲುಗುಗಳಿಗೆ 'ಕಂದ' ಎಂಬ ಹೆಸರಿನಲ್ಲಿ ಬಂದಿದೆ. ಇಂತಹ 'ಕಂದ'ವು ಚಂಪೂ ಕಾವ್ಯಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಬಂಧವಾಗಿದೆ. ಅದರಲ್ಲೂ ಕನ್ನಡದ ಪಾಂಡಿತ್ಯ ಪ್ರಧಾನ ಕಾವ್ಯಗಳಲ್ಲಿ ಇದಕ್ಕೆ ಪ್ರಧಾನ ಸ್ಥಾನ ದೊರೆತಿದೆ. 'ಕಂದ'ವು ರಗಳೆ, ವೃತ್ತ ಮೊದಲಾದುವುಗಳಂತೆ ದೀರ್ಘವಾಗಿ ಎಳೆದು ಹೇಳುವಂತಹದಲ್ಲ; ಹೇಳಬೇಕಾದದ್ದನ್ನು ಚಿಲುಮೆಯಂತೆ ಚಿಮ್ಮುವ ಲಯಗಳಿಂದ ಚಿಕ್ಕಚಿಕ್ಕ ಭಾವಗಳನ್ನು ಚೊಕ್ಕವಾಗಿ ಪ್ರಕಟಿಸುತ್ತದೆ. ಉಪಮೆ ಮತ್ತು ದೃಷ್ಟಾಂತಗಳಿಂದ ಭಾವವನ್ನು ಮಿಂಚಿನಂತೆ ಬೆಳಗುವಂತಹುದು. ಆದ್ದರಿಂದ ಕಂದವು ಹಳಗನ್ನಡ ಸಾಹಿತ್ಯದ ಜೀವಾಳವಾಗಿದೆ. ಗ್ರಾಂಥಿಕ ಸಾಹಿತ್ಯ ಮತ್ತು ಶಾಸನಸಾಹಿತ್ಯ ಇವೆರಡರಲ್ಲಿಯೂ ಇತರೆ ಪದ್ಯ ಜಾತಿಗಳಿಗಿಂತ ಹೆಚ್ಚಾಗಿ ಕಂದ ಪದ್ಯದಲ್ಲಿ ರಚನೆಯಾಗಿವೆ. ಅಂದಮಾತ್ರಕ್ಕೆ ಕಂದಪದ್ಯಗಳಿಂದಲೇ ಕಾವ್ಯಗಳು ರಚನೆಯಾಗಿರುವುದೂ ಕಡಿಮೆ. ಆದರೆ ಚಂಪೂವಿನಲ್ಲಿ ಮುಕ್ಕಾಲು ಪಾಲು ಕಂದ, ಕಾಲು ಪಾಲು – ಖ್ಯಾತಕರ್ನಾಟಕಗಳಾಗಿವೆ.

ಕಂದಪದ್ಯವು ಪ್ರಾಚೀನದಿಂದಲೂ ಕಾವ್ಯಗಳಲ್ಲಿ, ಶಾಸನಗಳಲ್ಲಿ ಪ್ರಯೋಗವಾಗುತ್ತಾ ಬಂದಿದೆ. ಕನ್ನಡದಲ್ಲಿ ಈ ಕಂದಪದ್ಯದ ಲಕ್ಷಣವನ್ನು ಮೊದಲಿಗೆ ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ನಿರೂಪಿಸಿದ್ದಾನೆ.

**ಕಂದದ ಲಕ್ಷಣ ಪದ್ಯ:**

**"ಪುರಬಾಣವಹ್ನಿ ಶರಗಣ**  
**ಮಿರೆ ನಾಲ್ಕುಂ ಪದದೊಳೋಜೆಯುಗ್ಮಗಳೊಳ್ ಪ।**  
**ನ್ನೆರಡಿರ್ಪತ್ತೋಳಿಯೆ ಪ**  
**ನ್ನೆರಡಿರ್ಪತ್ತಾಗೆ ಮಾತ್ರೆಗಳ್ ಮೃಗನಯನೇ"॥**

ನಾಗವರ್ಮನ ಈ ಪದ್ಯವು ಕಂದಪದ್ಯದ ಲಕ್ಷಣಗಳನ್ನು ವಿವರಿಸಿದೆ. ಕಂದಪದ್ಯದಲ್ಲಿ

ನಾಲ್ಕು ಪಾದಗಳಿವೆ. ಇವುಗಳಲ್ಲಿಯ ಕಿರಿಯ ಪಾದಗಳು ಎರಡು ಮತ್ತು ಹಿರಿಯ ಪಾದಗಳು ಎರಡಿವೆ. ಕಿರಿಯ ಚರಣಗಳಲ್ಲಿ ನಾಲ್ಕು ನಾಲ್ಕು ಮಾತ್ರೆಯ ಮೂರುಗಣಗಳು; ಹಿರಿಯ ಚರಣಗಳಲ್ಲಿ ನಾಲ್ಕು ಮಾತ್ರೆಯ 5 ಗಣಗಳು ಬರುತ್ತವೆ. ಒಂದು ಮತ್ತು ಎರಡನೆಯ ಸಾಲುಗಳು ಪೂರ್ವಾರ್ಧವಾಗಿದ್ದು ಮೂರು – ಐದು ಗಣಗಳಿಂದ ಕೂಡಿರುತ್ತವೆ. ಹಾಗೂ 12 + 20 = 32 ಮಾತ್ರೆಗಳನ್ನು ಹೊಂದಿರುತ್ತವೆ. ಈ ಪೂರ್ವಾರ್ಧವು ಉತ್ತರಾರ್ಧಕ್ಕೆ ಸಮನಾಗಿರುತ್ತದೆ. ಅಂದರೆ ಕ್ರಮವಾಗಿ ನಾಲ್ಕು ಪಾದಗಳಲ್ಲಿಯೂ 3–5, 3–5 ಗಣಗಳಿರುತ್ತವೆ. ನಾಲ್ಕು ಪಾದಗಳಿಂದ 16 ಗಣಗಳಿರುತ್ತವೆ. ಹಾಗೂ 64 ಮಾತ್ರೆಗಳಿಂದ ಕೂಡಿರುತ್ತದೆ. ಇದರಂತೆ ಕಂದ ಪದ್ಯದ ಗಣಸ್ವರೂಪವು ಹೀಗಿರುತ್ತದೆ. ಪದ್ಯದ ವಿಷಮ ಸ್ಥಾನಗಳಲ್ಲಿ ಈ ರೂಪದ ಜಗಣ ಬರಬಾರದು. ಹಾಗೆಯೇ 6 ನೆಯ ಗಣಸ್ಥಾನದಲ್ಲಿ ಈ ರೀತಿಯ ಜಗಣವಾಗಲಿ ಅಥವಾ ಈ ರೀತಿಯ ಸರ್ವಲಘುವುಳ್ಳ ಗಣವಾಗಲಿ ತಪ್ಪದೇ ಬರಬೇಕು. ಇದೇ ಲಕ್ಷಣವನ್ನು ಹೋಲುವಂತೆ ಮುಂದಿನ ಜಯಕೀರ್ತಿ ಮೊದಲಾದ ಲಾಕ್ಷಣಿಕರು ಕಂದ ಪದ್ಯದ ಲಕ್ಷಣಗಳನ್ನು ನಿರೂಪಿಸಿದ್ದಾರೆ. ಈ ಲಾಕ್ಷಣಿಕರು ಹೇಳಿರುವ ಲಕ್ಷಣಗಳನ್ನು ಲಕ್ಷಿಸಿ ಕಂದಪದ್ಯದ ಇತಿಹಾಸವನ್ನು ನೋಡಿದರೆ ಅದು ಕನ್ನಡ ಶಾಸನಗಳಿಂದ ಪ್ರಾರಂಭವಾಗುತ್ತದೆ. ಕನ್ನಡ ಶಾಸನಗಳಲ್ಲಿ ಕಂದವು ಪ್ರಾಚೀನದಿಂದಲೂ ಪ್ರಯೋಗವಾಗಿದೆ. ಕಂದಪದ್ಯಗಳು ಕನ್ನಡ ಶಾಸನಗಳಲ್ಲಿ ಬಳಕೆಯಾಗಿದ್ದು ಸಾಹಿತ್ಯಿಕ, ಹಾಗೂ ಛಂದೋಬಂಧದ ದೃಷ್ಟಿಯಿಂದಲೂ ಪ್ರಾಮುಖ್ಯತೆ ಪಡೆದಿವೆ.

ಪ್ರಾಚೀನ ಕನ್ನಡ ಶಾಸನಗಳು ಮತ್ತು ಕನ್ನಡ ಶಾಸನಗಳಲ್ಲಿರುವ ಕಂದಪದ್ಯಗಳನ್ನು ಗುರುತಿಸುವಲ್ಲಿ ಕೃತಕ ಬುದ್ಧಿಮತ್ತೆ: ಕ್ರಿ.ಶ.ಸುಮಾರು 5ನೆಯ ಶತಮಾನದಿಂದ ರಚನೆಯಾಗಿರುವ ಕನ್ನಡ ಶಾಸನಗಳಲ್ಲಿ ಒಂದು ಶಾಸನದ ಫೋಟೋ ತೆಗೆದು ಕೃತಕ ಬುದ್ಧಿಮತ್ತೆಗೆ ಅಳವಡಿಸಿದರೆ ಶಾಸನವನ್ನು ಓದಲು ಸಿದ್ಧಮಾಡಿಕೊಳ್ಳುತ್ತದೆ. ಅಂದರೆ ಕಲ್ಲಿನ ಮೇಲಿನ ಧೂಳು, ಪಾಚಿ, ಬಿರುಕುಗಳನ್ನು ಮಸುಕು ಮಾಡಿ ಅಕ್ಷರ ಮಾತ್ರ ಸ್ಪಷ್ಟವಾಗಿ ಕಾಣುವಂತೆ ಮಾಡುತ್ತದೆ. ಆಗ ಅಕ್ಷರ ಎದ್ದು ಕಾಣುತ್ತದೆ. ಕೆಲವು ಕಡೆ ನೆರಳು ಬರುತ್ತದೆ ಆಗ AI ಬಳಸಿ ಕಲ್ಲನ್ನು 3ಡಿ ಮಾದರಿ ಮಾಡಿ ಎಲ್ಲಾ ಕಡೆಯಿಂದ ಬೆಳಕು ಹಾಕಿ ನೋಡುತ್ತದೆ. ಹಾಗೆಯೇ ಅಕ್ಷರ ಇರೋ ಜಾಗವನ್ನು ಗುರುತಿಸಿ ತರಹದ ಮಾದರಿಗಳು ಫೋಟೋ ಸ್ಕ್ಯಾನ್ ಮಾಡಿ ಪ್ರತಿ ಅಕ್ಷರದ ಸುತ್ತ ಬಾಕ್ಸ್ ಹಾಕುತ್ತವೆ. ಉದಾಹರಣೆಗೆ: ಹಳಗನ್ನಡದ 'ಕ' ಮತ್ತು 'ತ' ಹೆಚ್ಚು ಹೋಲುತ್ತವೆ. ಆದರೂ ಅಕ್ಷರದ ವಕ್ರತೆ, ಗೆರೆಗಳ ಸಂಖ್ಯೆಗಳನ್ನು ನೋಡಿ ಬೇರೆ ಮಾಡುತ್ತದೆ. ಹಾಗೆಯೇ ಸಾಲುಗಳು/ ಗೆರೆಗಳು ಓರೆಯಾಗಿದ್ದರೂ ಅದನ್ನು ನೇರಮಾಡಿಕೊಂಡು ಓದುತ್ತದೆ. ಸಿಎನ್‌ಎನ್–ಅಕ್ಷರಗಳನ್ನು ಅಲ್ಲಿನ ಚಿತ್ರ ನೋಡಿ ಗುರುತಿಸುವಾಗ ಶಾಸನದಲ್ಲಿನ ಅರ್ಧ ಸವೆದ ಅಕ್ಷರಗಳು ಬಂದಾಗಲೂ ಅದರ ಶೇ70 ಲಕ್ಷಣವನ್ನು ಗುರುತಿಸುತ್ತದೆ. ಉದಾಹರಣೆಗೆ: 'ಅ' ಅಕ್ಷರವನ್ನು ಗುರುತಿಸುವಾಗ, ಲಕ್ಷಾಂತರ ಹಳಗನ್ನಡದ 'ಅ' ಅಕ್ಷರಗಳನ್ನು ಫೋಟೋ ನೋಡಿ ಕಲಿತಿರುತ್ತದೆ. ಈ ಆಧಾರದಿಂದ 'ಅ' ಅಕ್ಷರವನ್ನು ಶೇ 70ರಷ್ಟು ಗುರುತಿಸುತ್ತದೆ. ಕೆಲವು ಬಾರಿ ಸಂದರ್ಭ ನೋಡಿ ಗುರುತಿಸುತ್ತದೆ ಅಥವಾ ಊಹೆ ಮಾಡುತ್ತದೆ. ಉದಾಹರಣೆಗೆ: "ಶ್ರೀಮತ್ ಪ್ರಥ.." ಇದರ ಮುಂದಿನ ಅಕ್ಷರ 'ಮ' ಆಗಿರೋ ಸಾಧ್ಯತೆ ಹೆಚ್ಚು ಇರುತ್ತದೆ ಎಂದು ತಿಳಿದಿರುತ್ತದೆ. ಹಾಗೆಯೇ ಲಿಪಿಗಳ ವಿಕಾಸವು AI ಗೆ ಗೊತ್ತಿರುವುದರಿಂದ ಅಕ್ಷರಗಳ ಶೈಲಿಯನ್ನು ಗುರುತಿಸಿ ಕಾಲವನ್ನು ನಿರ್ಣಯಿಸುತ್ತದೆ. ಹೀಗೆ ಎಲ್ಲಾ ಅಕ್ಷರಗಳನ್ನು ಗುರುತಿಸಿಕೊಂಡ ಮೇಲೆ ಶಾಸನ ಪಾಠ ಮತ್ತು ಅರ್ಥಗಳನ್ನು ಪದ, ವಾಕ್ಯ ಜೋಡಣೆಗಳೊಂದಿಗೆ ನೀಡುತ್ತದೆ.

ಇದಕ್ಕೆ ಪೂರಕವಾಗಿ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಪುರ ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ.1227ರ ಶಾಸನವನ್ನು ಅಳವಡಿಸಿ ಈ ಶಾಸನದ ಕಾಲ, ಶಾಸನದ ಹೊಸಗನ್ನಡ ರೂಪ, ಇದರಲ್ಲಿನ ಪದ್ಯಗಳು ಹಾಗೂ ಛಂದೋ ಪ್ರಕಾರಗಳನ್ನು ಕೇಳಿದಾಗ ಈ ಕಲ್ಲಿನ ಅಕ್ಷರಗಳು ತುಂಬಾ ಚಿಕ್ಕದಾಗಿವೆ, ಹಾಗಾಗಿ 100% ನಿಖರ ಪಾಠಕ್ಕೆ ಬೇಕು ಎಂದಿತು. ಆದರೂ ಇದು ಹೊಯ್ಸಳ ಕಾಲದ ಕ್ರಿ.ಶ.ಸುಮಾರು 12–13ನೇ ಶತಮಾನದ ಶಾಸನ "ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ" ಎಂಬ ಬಿರುದುಗಳುಳ್ಳ ಹೊಯ್ಸಳ ವೀರ ಬಲ್ಲಾಳ ಅಥವಾ ನರಸಿಂಹನ ಕಾಲಕ್ಕೆ ಸೇರುತ್ತದೆ ಎಂದು ತಿಳಿಸಿತು. ಮೂಲತಃ ಈ ಶಾಸನವು ಹೊಯ್ಸಳ ದೊರೆ ವೀರ ನಾರಸಿಂಹದೇವ ಅಂದರೆ ಎರಡನೇ ನರಸಿಂಹನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಶಾಸನವು ನಿಟ್ಟೂರಿನ ಸ್ವಯಂಭು ಕಲಿದೇವ ದೇವರಿಗೆ ಕೆಲವು ಭೂಮಿಗಳನ್ನು ಮತ್ತು ಕೆಲವು ತೆರಿಗೆಗಳಿಂದ ಬರುವ ಆದಾಯವನ್ನು ದಾನವಾಗಿ ನೀಡಿದುದನ್ನು ದಾಖಲಿಸುತ್ತದೆ. ಈ ಸ್ಥಳವನ್ನು ದಕ್ಷಿಣ ಐವೊಳೆ ಮತ್ತು ಹರುಹೆ ನಾಡಿನ ರತ್ನ ಎಂದು ಕರೆಯಲಾಗಿದೆ. ಈ ದಾನ ಶಾಸನವು ದೇವಾಲಯದ ಪೂಜೆ, ನೈವೇದ್ಯ ಮತ್ತು ಜೀರ್ಣೋದ್ಧಾರ ಕಾರ್ಯಗಳಿಗಾಗಿ ಮಾಡಲ್ಪಟ್ಟಿದೆ. ನಾಗಣ್ಣನ ಮಗನಾದ ಶ್ರೀಕರಣದ–ಪೆರ್ಗಡೆಯಾದ ಮಹಾಪ್ರಧಾನ ಕುಮಾರ ನಾರಸಿಂಗ ದಣ್ಣಾಯಕನು, ಹಿರಿಯ ರಾಣಿ ಪದ್ಮಲಾದೇವಿಯ ಸಮ್ಮುಖದಲ್ಲಿ ಮಹಾಪ್ರಭು ಮಸಣಗೌಡ ಮತ್ತು ಕಾಲಗೌಡರ ಉಪಸ್ಥಿತಿಯಲ್ಲಿ ಈ ದಾನವನ್ನು ಮಾಡಿದನು. ದಾನ ನೀಡಿದವನು ಹರುಹೆ 300ಅನ್ನು ಆಳುತ್ತಿದ್ದನು.

ಶಾಸನದ ಪದ್ಯಗಳು ಮತ್ತು ಛಂದಸ್ಸಿನ ವಿಚಾರಗಳಲ್ಲಿ: ಆರಂಭದ ಶಾಸನ ಪಾಠ ಎರಡು ಶ್ಲೋಕಗಳಿಂದ ಆರಂಭವಾಗಿದೆ. "ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ।ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ॥ ಎಂದಿದೆ. ಇದನ್ನು ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ। ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ॥ ಎಂದು ಬಿಡಿಯಾಗಿ ಹೇಳಿ ಅನುಷ್ಟುಪ್ ವೃತ್ತ ಎಂದು ಕರೆದಿದೆ. ಈ ವೃತ್ತದ ಪ್ರತಿ ಪಾದದಲ್ಲಿ 8 ಅಕ್ಷರಗಳಿರುತ್ತವೆ ಹಾಗೂ ಈ ಲಘು–ಗುರು ವಿನ್ಯಾಸ ಕ್ರಮವನ್ನು ಸೂಚಿಸುತ್ತದೆ. ಇಲ್ಲಿ ಸೂಚಿಸುವ ಲಘು–ಗುರುಗಳ ಫಾಂಟ್ ಇಂಗ್ಲಿಷ್ ಭಾಷೆಯ U ಮತ್ತು – ಆಗಿರುತ್ತವೆ. ಕನ್ನಡದ ಫಾಂಟ್‌ಗಳ ಬಳಕೆ ಇರುವುದಿಲ್ಲ. ಶ್ಲೋಕದ ಅರ್ಥ: "ಮೂರು ಲೋಕವೆಂಬ ನಗರಕ್ಕೆ ಮೂಲಸ್ತಂಭದ ತಿರುವ, ತಲೆಬಾಗಿ ನಮಸ್ಕರಿಸುವ ಚಂದ್ರನೇ ಚಾಮರದಂತೆ ಶೋಭಿಸುವ ಶಂಭುವಿಗೆ ನಮಸ್ಕಾರ." ಇಲ್ಲಿ ಅರ್ಥವೂ ಸಮರ್ಪಕವಾಗಿದೆ.

ಶಾಸನ ಪಾಠದಲ್ಲಿನ ಛಂದಸ್ಸನ್ನು ಗುರುತಿಸುವ ಸಂದರ್ಭದಲ್ಲಿ ಕೇಳುವಂತೆ ಶಾಸನದ ಒಂದು ನಿರ್ದಿಷ್ಟ ಭಾಗವನ್ನು ಕಳುಹಿಸಿ ಇಲ್ಲಿನ ಪದ್ಯಗಳು ಮತ್ತು ಲಘು–ಗುರು ವಿನ್ಯಾಸ ಹಾಗೂ ಛಂದೋರೂಪಗಳನ್ನು ಗುರುತಿಸುವಂತೆ ಕೇಳಲಾಯಿತು. ಆಗ ಸಾಲು 24–25ರಲ್ಲಿ ಕಂದಪದ್ಯವಿದ್ದು 16ಮಾತ್ರೆಗಳಿವೆ, ಸಾಲು 29–39ರಲ್ಲಿ 21ಅಕ್ಷರಗಳ ಚಂಪಕಮಾಲೆ ಇದೆ, ಸಾಲು 30–31ರಲ್ಲಿ 20 ಅಕ್ಷರಗಳ ಉತ್ಪಲಮಾಲೆ ಇದೆ ಎಂದು ಮಾಹಿತಿ ನೀಡಿದೆ. ಹಾಗೆಯೇ 24ನೆಯ ಸಾಲಿಗೆ ಲಘು–ಗುರು ಹಾಕಿ ಗಣ ವಿಂಗಡಣೆ ಮಾಡಿರುವುದು ಹೀಗಿದೆ: ಕುಳದೊಳು । ಸತ್ಯದೊ । ಳಂ ನಿಷ್ಠಾ । ಚರಣದೊ । ಳು ಇಲ್ಲಿನ ಪ್ರಸ್ತಾರ ಮತ್ತು ಗಣ ವಿಭಾಗ ಕ್ರಮ ಸರಿಹೊಂದುವುದಿಲ್ಲ. ಹಾಗೆಯೇ AI ನೀಡಿರುವ ಶಾಸನಪದ್ಯದ ಯಾವುದೇ ಸಾಲಿನ ಲಘು–ಗುರು ಪ್ರಸ್ತಾರವಾಗಲಿ, ಗಣವಿಂಗಡಣೆಯ ಕ್ರಮಗಳಾಗಲಿ ಸರಿಹೊಂದಿರುವುದಿಲ್ಲ, ಪ್ರಸ್ತುತ ಪುರ ಶಾಸನದಲ್ಲಿ 28 ರಿಂದ 33ನೆಯ ಸಾಲಿನವರೆಗೆ ಮೂರು ಕಂದಪದ್ಯಗಳಿವೆ:

**ಎನೆ ನೆಗಳ್ದ ನಾಗರಾಜನ**
**ತನೆಯಂ ವಿಭು ಭಾಸ್ಕರಾರ್ಯ್ಯನಾತನ ತಮ್ಮಂ**
**ಜನವಿನುತ ಮಲ್ಲಿಕಾರ್ಜುನ**
**ನನುಜಂ ಗುಣಿ ನಾರಸಿಂಗ ದಂಡಾಧೀಶ॥**

**ಚಲದಂಕರಾಮ ಚಕ್ರಿಯ**
**ಬಲದೊಳು ಪೆಸರ್ವೆತ್ತ ದಂಡನಾಥರೊಳೀತಂ**
**ಸಲೆ ನೆಗಳ್ದಂ ತದ್ಧಾತ್ರೀ**
**ತಳಂ ಪೊಗಳೆ ಕಲಿಗಳಂಕುಸಂ ನರಸಿಂಗಂ॥**

**ತೊಳಪೆಳೆವೆಜೆ ಕೆಂಜಡೆಯೊ**
**ಳ್ವಳಚ್ಚನಿರಲಲ್ಲಿ ಬಳಸೆ ಗಂಗಾನದಿ ಕ**
**ಣ್ಗೊಳಿಪ ಕಲಿದೇವನತ್ತು**
**ಜ್ವಳಕೀರ್ತ್ತಿಗೆ ನಾರಸಿಂಹ ನಿನಗೀಗೊಳ್ವಂ॥**

ಹೊಯ್ಸಳ ದೊರೆ ವೀರ ನಾರಸಿಂಹನನ್ನು ಈ ಪದ್ಯಗಳಲ್ಲಿ ವರ್ಣಿಸಲಾಗಿದೆ. ಈ ಮೂರು ಕಂದಪದ್ಯಗಳಲ್ಲಿ ಮೇಲೆ ಲಾಕ್ಷಣಿಕರು ಹೇಳಿರುವ ಕಂದಪದ್ಯದ ಎಲ್ಲಾ ಲಕ್ಷಣಗಳು ಪರಿಪಾಲನೆಯಾಗಿವೆ. ಆದರೆ ಇಲ್ಲಿನ ಕಂದಪದ್ಯದ ಪ್ರಸ್ತಾರ ಕ್ರಮ ಮತ್ತು ಗಣವಿಂಗಡಣೆಯನ್ನು ಸೂಕ್ತವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಕಂದಪದ್ಯದ ಲಕ್ಷಣಗಳನ್ನು ಹೇಳುವಾಗ ಪ್ರತಿ ಪಾದ 16 ಮಾತ್ರೆಗಳಿಂದ ಕೂಡಿರುತ್ತದೆ. 1ನೇ ಪಾದ:4+4+4+3+1=16, 2ನೇ ಪಾದ: 2+4+4+4+4+3=21? ಇಲ್ಲಿ ಶಾಸನಗಳಲ್ಲಿ ಮಾತ್ರಾ ನಿಯಮ ಸ್ವಲ್ಪ ಸಡಿಲ ಎನ್ನುತ್ತದೆ. ಹಾಗೆಯೇ ತನ್ನ ಟಿಪ್ಪಣಿಯಲ್ಲಿ ಶಾಸನ ಪದ್ಯಗಳಲ್ಲಿ ಶಾಸ್ತ್ರೀಯ ಛಂದಸ್ಸು ಶೇ100 ಪಾಲನೆಯಾಗುವುದಿಲ್ಲ. ಒತ್ತಕ್ಷರ, ತತ್ಸಮ–ತದ್ಭವಗಳಿಂದ1–2 ಮಾತ್ರೆ/ಅಕ್ಷರ ಹೆಚ್ಚು–ಕಡಿಮೆ ಆಗುತ್ತೆ. ಆದರೆ ಗಣದ ನಡಿಗೆ ಮತ್ತು ಯತಿ ನೋಡಿ ಗುರುತಿಸುತ್ತದೆ ಎಂದಿದೆ.

ಒಟ್ಟಾರೆ ಕನ್ನಡ ಶಾಸನಗಳಲ್ಲಿ ಕಂದ ಪದ್ಯಗಳನ್ನು ಗುರುತಿಸಲು ಮತ್ತು ವಿಶ್ಲೇಷಿಸಲು ಕೃತಕ ಬುದ್ಧಿಮತ್ತೆ ಮತ್ತು ಯಂತ್ರಕಲಿಕೆ AI ತಂತ್ರಜ್ಞಾನಗಳು ಮಹತ್ವದ ಪಾತ್ರವಹಿಸುತ್ತವೆಯಾದರೂ ಹಳೆಯ, ಅಸ್ಪಷ್ಟ ಅಕ್ಷರಗಳನ್ನು ಪತ್ತೆಹಚ್ಚಿ ಅವುಗಳಲ್ಲಿನ ಪದ್ಯದ ರಚನೆಯನ್ನು ಗುರುತಿಸುವುದು ಸಾಂಪ್ರದಾಯಿಕ ವಿಧಾನಗಳಲ್ಲಿ ಕಷ್ಟಕರವಾಗಿದೆ. ಅಲ್ಗಾರಿದಮ್‌ಗಳು ಶಾಸನದ ಪಠ್ಯದಲ್ಲಿ ಲಘು–ಗುರು ಮಾದರಿಗಳನ್ನು ಗುರುತಿಸಿ ಅದು ಕಂದ ಪದ್ಯವೇ ಎಂದು ದೃಢೀಕರಿಸುವಲ್ಲಿ ಸಂಪೂರ್ಣವಾಗಿ ಸಫಲವಾಗಿಲ್ಲ. ಆದರೆ ಮುಂದಿನ ದಿನಗಳಲ್ಲಿ ಛಂದಸ್ಸಿನ ಸಾಂಪ್ರದಾಯಿಕ ವಿಧಾನಗಳು (ಎಐ) ಯಂತ್ರಕಲಿಕೆಗೆ ಸಂಪೂರ್ಣವಾಗಿ ಅಳವಡಿಕೆಯಾದಲ್ಲಿ ಕನ್ನಡ ಶಾಸನಗಳಲ್ಲಿನ ಕಂದಪದ್ಯಗಳು ಹಾಗೂ ಇತರೆ ಛಂದೋರೂಪಗಳನ್ನು ಓದುಗರು, ಅಧ್ಯಯನಕಾರರು ಹಾಗೂ ವಿದ್ಯಾರ್ಥಿಗಳು ಸಮರ್ಥವಾಗಿ ಬಳಸಿಕೊಂಡು ಅಧ್ಯಯನ ನಡೆಸಲು ಸಾಧ್ಯವಾಗುತ್ತದೆ.